

(43ನೇ ಪುಟದಿಂದ)

ಗ್ರಾಮದಲ್ಲಿ 800 ಸಸಿಗಳನ್ನು ಖರೀದಿಸಿದೆ. ಅವುಗಳನ್ನು 30x30 ಅಡಿ ಅಂತರದಂತೆ ತಗ್ಗುಗಳನ್ನು ತೆಗೆದು ಸಸಿಗಳನ್ನು ನಾಟಿ ಮಾಡಿಸಿದೆ. ಹೀಗೆ ನಾಟಿ ಮಾಡಿದ ಸಸಿಗಳು ಬೆಳೆದು 6–7 ವರ್ಷದಲ್ಲಿ ಫಲ ನೀಡಲು ಪ್ರಾರಂಭಿಸಿದವು. ಈಗ ಗಿಡಗಳು ಸುಮಾರು 16–17 ವರ್ಷದ ಗಿಡಗಳಾಗಿವೆ. ಕೈತುಂಬ ಫಸಲು ಬರುತ್ತಿದೆ.'

'ಕೊಟ್ಟಿಗೆ ಗೊಬ್ಬರ, ಕೆಂಪು ಮಣ್ಣು ಹಾಗೂ ಮರಳನ್ನು ಸಮ ಪ್ರಮಾಣದಲ್ಲಿ ಬೆರಸಿ ಒಂದೊಂದು ಗಿಡಕ್ಕೆ ಒಂದು ಪುಟ್ಟಿಯಂತೆ ಗಿಡದ ಸುತ್ತಲೂ ಹಾಕಿಸಿದ್ದೇನೆ. ಇದರಿಂದ ಇಳುವರಿ ಏರಿಕೆಯಾಗುತ್ತದೆ. ಸಾಕಷ್ಟು ಪ್ರಮಾಣದಲ್ಲಿ ನೀರನ್ನು ಬೇಡುವ ತೆಂಗಿಗೆ ಮೂರು ಕೊಳವೆ ಬಾವಿಗಳಿಂದ ನೀರನ್ನು ಪೂರೈಸುತ್ತಿದ್ದೇವೆ. ಅಂದ ಹಾಗೆ ನೀರನ್ನು ಸ್ಪ್ರಿಂಕ್ಲರ್ ಮೂಲಕ ನೀಡಲಾಗುತ್ತಿದೆ. ಇದರಿಂದ ಎಲ್ಲಾ ಕಡೆಗೂ ನೀರು ದೊರಕುವಂತೆ ಆಗಿದೆ' ಎನ್ನುವುದು ಅವರ ಅನುಭವದ ಮಾತು.

ಇದುವರೆಗೂ ಗಿಡಗಳಿಗೆ ಯಾವುದೇ ಔಷಧವನ್ನು ಸಿಂಪಡಿಸಿರುವುದಿಲ್ಲ. ನೀರನ್ನು ವಾರಕ್ಕೆರಡು ಬಾರಿಯಂತೆ ಸರಿಯಾದ ಸಮಯಕ್ಕೆ ಪೂರೈಸುತ್ತಾ ಬಂದಿರುವುದರಿಂದ ಗಿಡಗಳು ಚೆನ್ನಾಗಿವೆ. ಇಲಿಗಳ ನಿಯಂತ್ರಣಕ್ಕೆ ವಿಷ ಬೆರೆಸಿದ ತಿಂಡಿಯನ್ನು ಗಿಡದ ಸುಳಿಭಾಗದಲ್ಲಿ ಇಟ್ಟು ನಿಯಂತ್ರಣ ಮಾಡುತ್ತಿದ್ದೇವೆ ಎಂದು ತೆಂಗು ಕೃಷಿಯ ಯಶೋಗಾಥೆಯ ಮಾಹಿತಿಯನ್ನು ನೀಡುತ್ತಾರೆ ರೇವಣಸಿದ್ದಪ್ಪ.

**ಆದಾಯ:** ವಾರ್ಷಿಕವಾಗಿ ಒಂದು ಮರದಿಂದ 150 ಕಾಯಿಗಳು ಸಿಗುವುದು ಖಚಿತ. 800 ಮರಗಳಿಗೆ 1,20,000 ಕಾಯಿಗಳು ಬರುತ್ತವೆ. ಖರ್ಚು ಒಂದು ಲಕ್ಷ ರೂಪಾಯಿ ತಗಲುತ್ತದೆ. ನಾವು ಎಳೆನೀರನ್ನು ಕೊಡುವು-ದಿಲ್ಲ. ಕಾಯಿಗಳನ್ನೇ 8–10 ರೂಪಾಯಿಯಂತೆ ಮಾರಾಟ ಮಾಡುತ್ತೇವೆ. ಇದರಿಂದ ಖರ್ಚು ತೆಗೆದು ಕನಿಷ್ಠವೆಂದರೂ 9 ಲಕ್ಷ ರೂಪಾಯಿ ಆದಾಯ ಬರುತ್ತದೆ ಎನ್ನುತ್ತಾರೆ ಈ ಯಶಸ್ವಿ ಕೃಷಿಕ.

### ತೆಂಗಿನ ನಡುವೆ ಮಾವು ಕೃಷಿ

ಆದಾಯ ಹೆಚ್ಚಿಸುವಲ್ಲಿ ಅವರು ಬೇರೆ ದಾರಿಯನ್ನೂ ಕಂಡುಕೊಂಡಿದ್ದಾರೆ. 'ತೆಂಗಿನ ಗಿಡದ ನಡುವೆ ಪ್ರಾರಂಭದಲ್ಲಿ ಹತ್ತು ಮಾವಿನ ಗಿಡಗಳನ್ನು ಮನೆಯ ಬಳಕೆಗೆಂದು ಹಾಕಲಾಗಿತ್ತು. ಆರು ವರ್ಷ ಪೂರೈಸಿದ ಮರಗಳಲ್ಲಿ ಸುಮಾರು 4000–4500 ಕಾಯಿಗಳು ಹಿಡಿದವು. ಇದರಿಂದ 45 ಸಾವಿರ ರೂಪಾಯಿ ಕೈಗೆ ಬಂದಿತು. ಇದರಿಂದ ಪ್ರೇರಿತನಾಗಿ ಮಾವಿನ ಫಸಲಿಗೂ ಮನಸ್ಸು ಮಾಡಿದೆ' ಎಂದರು.

ಆರಂಭದಲ್ಲಿ ಸೊಂಡೂರು ತಾಲ್ಲೂಕಿನ ರಾಘಾಪುರ ನರ್ಸರಿಯಿಂದ ತೋತಾಪುರಿ, ನೀಲಂ, ಬೇವಿನಿಷ, ಬೆಂಗಳೂರು, ಬಾದಾಮಿ ತಳಿಯ 50 ಗಿಡ-ಗಳನ್ನು ತರಿಸಿ ನೆಟ್ಟರು. ಮಾರನೆಯ ವರ್ಷ ಆಮ್ಲೆಟ್, ರಸಪುರಿ, ಇಮಾಮ್ ಪಸಂದ್, ಮಲ್ಲಿಕಾ, ಅಲ್ಫಾನ್ಸೋ, ಪೆದ್ದರಸಂ, ಚುರುಕು ರಸಂ ತಳಿಯ ವಿವಿಧ ಮಾವಿನ ತಳಿಯ ಸಸಿಗಳನ್ನು ನೆಟ್ಟರು. ಸಸಿ ನೆಟ್ಟ ಮೂರು ವರ್ಷಕ್ಕೆ ಹೂ ಬಿಡುವ ಮರಗಳು ಐದು ವರ್ಷದಿಂದ ಆದಾಯವನ್ನು ತಂದುಕೊಡುತ್ತವೆ. ಈಗ ಹನ್ನೆರಡನೆಯ ಫಸಲನ್ನು ಮರಗಳು ಹೊತ್ತು ನಿಂತಿವೆ. ಹಿಂದಿನ ವರ್ಷ ಒಂದೂವರೆ ಲಕ್ಷ ರೂಪಾಯಿಗಳಿಗೆ ಗುತ್ತಿಗೆ ನೀಡಿದ್ದರೆ, ಈ ವರ್ಷ ಇಳುವರಿ ಕಡಿಮೆಯಿಂದಾಗಿ ಒಂದು ಲಕ್ಷ ರೂಪಾಯಿಗೆ ಗುತ್ತಿಗೆ ನೀಡಿದ್ದಾರೆ.

ಅಂದ ಹಾಗೆ ತೋಟದ ಸುತ್ತಲೂ ಆದಾಯವನ್ನು ತರುವ 150 ತೇಗದ ಮರಗಳನ್ನೂ ಇವರು ಬೆಳೆಸಿದ್ದಾರೆ. 25 ಹುಣಸೆ ಮರಗಳೂ ತೋಟದ ಸುತ್ತ ಸ್ಥಾನವನ್ನು ಪಡೆದುಕೊಂಡಿವೆ.

ಇವರ ಮೂವರು ಮಕ್ಕಳಲ್ಲಿ ಇಬ್ಬರು ಕೃಷಿಯನ್ನೇ ಅವಲಂಬಿಸಿದ್ದು ತಂದೆ ಬೆಳೆಸಿರುವ ತೋಟವನ್ನು ಜತನದಿಂದ ಕಾಪಾಡಿಕೊಂಡು ಬರುತ್ತಿದ್ದಾರೆ. ತಂದೆಯ ಮಾರ್ಗದರ್ಶನ ಅವರನ್ನೂ ಪ್ರಗತಿಪರ ಕೃಷಿಕರನ್ನಾಗಿಸಿದೆ. ಹಾಗೆಯೇ ಇನ್ನುಳಿದ ಒಂಭತ್ತು ಎಕರೆ ಭೂಮಿಯಲ್ಲಿ ಹತ್ತಿ, ಶೇಂಗಾ, ಮೆಕ್ಕೆಜೋಳವನ್ನು ಬೆಳೆದಿದ್ದಾರೆ.

(ಸಂಪರ್ಕಕ್ಕೆ ಮೊಬೈಲ್: ೯೦೦೮೮-೩೯೦೭೬)